
ಈ ನೆಲದಲ್ಲಿ 19ನೇ ಶತಮಾನದಲ್ಲೂ ಗಂಡ ಸತ್ತ ಹೆಣ್ಣನ್ನು 'ಸತಿ'ಯಾಗಿಸುವ ಸಂಪ್ರದಾಯವಿದ್ದಾಗ, 1,400 ವರ್ಷಗಳಿಗೂ ಹಿಂದೆಯೇ ಪೈಗಂಬರರು ವಿಧವೆಯಾದ, ತಮಗಿಂತ ವಯಸ್ಸಿನಲ್ಲಿ ಹಿರಿಯವಳಾದ ಖತೀಜಾರನ್ನು ವಿವಾಹವಾಗಿದ್ದರು. ವಿಧವಾ ವಿವಾಹದಂತಹ ಮಾನವೀಯ ಹಾಗೂ ಸ್ತ್ರೀಸಮಾನತೆಯ ಆಶಯಗಳನ್ನು ಪೋಷಿಸಿದ ಧರ್ಮವೊಂದು, ಪರ್ದಾ ಮತ್ತು ಪಾಲಿಗಮಿಯಲ್ಲಿ ಸಿಕ್ಕಿಬಿದ್ದ ವಿಪರ್ಯಾಸ ಬಹುಶಃ ಇಕ್ಬಾಲುನ್ನೀಸಾ ಅವರನ್ನು ತೀವ್ರವಾಗಿ ಕಾಡಿತ್ತು. ಹಿಂದೂ ಸಮುದಾಯ ಸತಿ ಪದ್ಧತಿ, ಬಹುಪತ್ನಿತ್ವದಂತಹ ಅನಿಷ್ಟಗಳಿಂದ ಬಿಡುಗಡೆ ಪಡೆದು ಪ್ರಗತಿಗಾಮಿಯಾಗಿ ಮುಂದುವರೆದಿರುವಾಗ, ಮುಸ್ಲಿಂ ಹೆಣ್ಣುಮಕ್ಕಳು ಶಿಕ್ಷಣವಿಲ್ಲದೆ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಕತ್ತಲ ಯುಗದಲ್ಲಿ ಬಾಳಬೇಕಾದ ಪರಿಸ್ಥಿತಿ ಅವರನ್ನು ತಲ್ಲಣಗೊಳಿಸಿದೆ.

## ಯಾರೀಕೆ ಇಕ್ಬಾಲುನ್ನೀಸಾ ಹುಸೇನ್?

ಇಕ್ಬಾಲುನ್ನೀಸಾ ಹುಸೇನ್ 1897ರಲ್ಲಿ ಚಿಕ್ಕಬಳ್ಳಾಪುರದಲ್ಲಿ ಜನಿಸಿದರು. ಹದಿನೈದರ ವಯಸ್ಸಿನಲ್ಲಿ ಬೆಂಗಳೂರಿನ ಸಯ್ಯದ್ ಅಹ್ಮದ್ ಹುಸೇನ್ ಅವರನ್ನು ಮದುವೆಯಾದವರು. (ಕೆಲವು ಮೂಲಗಳು ಆಕೆ 1900ರಲ್ಲಿ ಜನಿಸಿದ್ದು, 1914ರಲ್ಲಿ ವಿವಾಹವಾದದ್ದು ಎಂದು ತಿಳಿಸುತ್ತವೆ). ಏಳು ಮಕ್ಕಳ ತಾಯಿ ಈಕೆ. ಅಷ್ಟು ಚಿಕ್ಕ ವಯಸ್ಸಿಗೆ ಮದುವೆಯಾಗಿ ಅಂತರವಿಲ್ಲದೆ ಹುಟ್ಟಿದ ಏಳು ಮಕ್ಕಳಾದರೂ, ತಮ್ಮ ವಿದ್ಯಾಭ್ಯಾಸದ ಉತ್ಕಟ ಹಂಬಲದಲ್ಲಿ, ಪತಿಯ ಬೆಂಬಲದಲ್ಲಿ, ಈಕೆ ಮೈಸೂರಿನ ಮಹಾರಾಣಿ ಕಾಲೇಜಿನಿಂದ ಚಿನ್ನದ ಪದಕದೊಡನೆ ಬಿ.ಎ. ಪದವಿ ಪಡೆದರು. ಏಳನೇ ಕೈಗೂಸನ್ನು ಮಡಿಲಲ್ಲಿ ಹೊತ್ತು 1933ರಲ್ಲಿ ಇಂಗ್ಲೆಂಡಿಗೆ ಹೋಗಿ, 'ಲೀಡ್ಸ್ ವಿಶ್ವವಿದ್ಯಾಲಯ'ದಿಂದ ಸ್ನಾತಕೋತ್ತರ ಪದವಿ ಪಡೆದ ಅದ್ಭುತ ಸಾಹಸಗಾಥೆ ಇವರದು.

ಬೆಂಗಳೂರಿಗೆ ಹಿಂತಿರುಗಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡ ಇವರು, ಮಹಿಳಾ ಹಕ್ಕುಗಳ ಬಗ್ಗೆ ಸತತವಾಗಿ ಬರೆದು ಮಹಿಳಾ ಚಳವಳಿಯ ಭಾಗವಾದರು. ಆಕೆಯ ಈ ಲೇಖನಗಳು 1940ರಲ್ಲಿ 'ಚೇಂಜಿಂಗ್ ಇಂಡಿಯಾ, ಎ ಮುಸ್ಲಿಂ ವಿಮೆನ್ ಸ್ಪೀಕ್ಸ್' ಎಂಬ ಪುಸ್ತಕದಲ್ಲಿ ಪ್ರಕಟವಾದವು. ಇಕ್ಬಾಲುನ್ನೀಸಾ ಅವರದು




> ಹೊರಜಗತ್ತಿಗೆ ಕದ ಮುಚ್ಚಿ, ಹೆಣ್ಣುಮಕ್ಕಳ ಅರಳುವ ಅವಕಾಶಗಳನ್ನೆಲ್ಲ ಕಿತ್ತುಕೊಂಡು ಮನೆಯ ಒಳಗೆ ಕೂಡಿದಾಗ, ಪುರುಷತನದ ಸವಲತ್ತಿನಲ್ಲಿ ನಾಲ್ಕು ಪತ್ನಿಯರನ್ನು ತಂದು ಇಟ್ಟಾಗ, ಆ ಕತ್ತಲ ಜಗತ್ತಿನ ಆಧಿಪತ್ಯಕ್ಕಾಗಿ ನಡೆಯುವ ಪಿತೂರಿಗಳನ್ನು, ಅಂತರ್ ಸ್ಫೋಟಗಳನ್ನು ಇಕ್ಬಾಲುನ್ನೀಸಾ ಎವೆಮಿಟುಕಿಸದ ನೋಟದಲ್ಲಿ ನಮಗೆ ನೀಡುತ್ತಾರೆ.